



# ಭೂಗ್ರಹದ ‘ನೈಟ್‌ಲೈಫ್’

**ಭಾರತ ರಾತ್ರಿ ವೇಳೆ ವಿದ್ಯುತ್ ಬಳಸುವುದು ಹೆಚ್ಚಾಗಿದೆ. 2102ರಲ್ಲಿ ತೆಗೆದ ಭಾರತದ ಫೋಟೋಗೂ, 2016ರಲ್ಲಿ ತೆಗೆದ ಫೋಟೋಗೂ ಅಜಗಜಾಂತರ ವ್ಯತ್ಯಾಸವಿದೆ.**

**■ ಎಂ.ಅಬ್ದುಲ್ ರೆಹಮಾನ್ ಪಾಷ**

ಅಮೆರಿಕದ ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (ನಾಸಾ) ಮಾರ್ಚ್ 12ರಂದು ‘ಭೂಮಿಯು ರಾತ್ರಿ ಹೊತ್ತಿನಲ್ಲಿ ಹೇಗೆ ಕಾಣುತ್ತದೆ’ ಎಂಬುದರ ಹಲವಾರು ಚಿತ್ರಗಳನ್ನು ಬಿಡುಗಡೆ ಮಾಡಿದೆ. ಕಳೆದ 25 ವರ್ಷಗಳಿಂದ ‘ನೈಟ್ ಲೈಟ್’ ಯೋಜನೆಯಡಿಯಲ್ಲಿ ಭೂಮಿ ಕತ್ತಲೆಯಲ್ಲಿ ಮಿನುಗುವ ಇಂಥ ಚಿತ್ರಗಳನ್ನು ನಾಸಾ ಬಿಡುಗಡೆ ಮಾಡುತ್ತಲೇ ಇದೆ. ಆದರೂ ಈ ಬಾರಿಯ ಚಿತ್ರಗಳಲ್ಲಿ ಒಂದು ವಿಶೇಷವಿದೆ.

ನಾಸಾ ಇತ್ತೀಚೆಗೆ ಬಿಡುಗಡೆ ಮಾಡಿದ ರಾತ್ರಿ ಬೆಳಕಿನ ಚಿತ್ರಗಳಲ್ಲಿ ಮುಖ್ಯವಾಗಿ ಕಂಡಿದ್ದು ಭಾರತದ ಎರಡು ಚಿತ್ರಗಳು. ಒಂದು 2012 ರಲ್ಲಿ ತೆಗೆದಿದ್ದು, ಇನ್ನೊಂದು 2016ರಲ್ಲಿ (ತೀರಾ ಇತ್ತೀಚೆಗೆ) ತೆಗೆದಿದ್ದು. ಈ ನಾಲ್ಕು ವರ್ಷಗಳಲ್ಲಿ ನಮ್ಮ ದೇಶದಲ್ಲಿ ಎಷ್ಟು ತೀವ್ರವಾಗಿ ನಗರೀಕರಣವಾಗಿದೆ ಎನ್ನುವುದನ್ನು ಈ ಚಿತ್ರಗಳು ತೋರಿಸುತ್ತವೆ; ಬಹುಶಃ ಹಗಲಿನ ಬೆಳಕಿನಲ್ಲಿ ಮರೆಮಾಚುವ ಈ ಆತಂಕಕಾರಿ ಬೆಳವಣಿಗೆ ರಾತ್ರಿಯ ಕತ್ತಲಲ್ಲಿ ಬಹಿರಂಗಗೊಳ್ಳುತ್ತದೆ– ಇಂಥ ಚಿತ್ರಗಳಿಂದ.

